C.C. No.-6700/2025
Court witness is examined as PW-8

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ.
ಸಾಕ್ಷಿಯನ್ನು ದಿನಾಂಕ- **30.06.2026** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು- | ರಮೇಶ |
| ತಂದೆ / ಗಂಡನ ಹೆಸರು- | ರಾಜೇಂದ್ರ |
| ವಯಸ್ಸು- | 46 ವರ್ಷಗಳು |
| ಉದ್ಯೋಗ- | ಮುಖ್ಯ ಪೇದೆ |
| ವಾಸಸ್ಥಳ- | ಕನಕಗಿರಿ |

ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-

**1.** ನಾನು ದಿಃ **20-02-2020** ರಿಂದ **24-07-2025** ಸಾಲಿನವರೆಗೆ ಕಾರಟಗಿ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

**2.** ಸದರಿ ಪ್ರಕರಣದ ತನಿಖೆಯ ಕಡತವನ್ನು ಚಾಸಾ-**2** ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿದೆನು. ನಂತರ ದಿನಾಂಕಃ **05-12-2024** ರಂದು ಸದರಿ ಡಿ.ವೈ.ಎಸ್.ಪಿ ಗಂಗಾವತಿ ರವರು ಸದರಿ ಪ್ರಕರಣದಲ್ಲಿ 'ಸಿ' ಅಂತಿಮ ವರದಿ ಸಲ್ಲಿಸಲು ಪರವಾನಿಗೆ ನೀಡಿದ ಜ್ಞಾಪನ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಜ್ಞಾಪನ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**15** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**15**(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕಃ **15-12-2024** ರಂದು ಸದರಿ ಪ್ರಕರಣದಲ್ಲಿ ಪಿರ್ಯಾದಿದಾರನಿಗೆ ನೋಟಿಸ್ ಕೊಟ್ಟಿದ್ದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಪಿರ್ಯಾದಿದಾರನಿಗೆ ನೀಡಿದ ನೋಟಿಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-**16** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**16**(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕಃ **15-12-2024** ರಂದು ಸದರಿ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತನು ಸಿಗದ ಕಾರಣ ಮಾನ್ಯ ನ್ಯಾಯಾಲಯಕ್ಕೆ ಕಲಂ.**454** ಮತ್ತು **380** ಐ.ಪಿ.ಸಿ ನೇದ್ದರಲ್ಲಿ 'ಸಿ' ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

C.C. No.-6700/2025

Court witness is examined as PW-8

ಪಾಟೀಸವಾಲು- ಶ್ರೀ ಹೆಚ್.ಬಿ.ಎ ಆರೋಪಿತರ ಪರ ವಕೀಲರಿಂದ-

3. ನಾನು ಗುನ್ಾ್ ಸ್ಥಳಕ್ಕೆ ಹೋಗಿರುವುದಿಲ್ಲ. ನಾನು ಗುನ್ಾ್ ಸ್ಥಳದ ಸುತ್ತಮುತ್ತ ಸಿ.ಸಿ ಕ್ಯಾಮೇರಾಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಗುನ್ಹೆ ಸ್ಥಳವು ಕಾರಟಗಿಯ ಮಧ್ಯಭಾಗದಲ್ಲಿದೆ ಎಂದರೆ ಸರಿ. ಘಟನಾ ಸ್ಥಳಕ್ಕೆ ಅಕ್ಕಪಕ್ಕದ ಜನರನ್ನು ಚಾರ್ಜಶೀಟ್ ಸಲ್ಲಿಸುವ ಪೂರ್ವದಲ್ಲಿ ವಿಚಾರಣೆ ಮಾಡಿರುತ್ತೇನೆ. ಆರೋಪಿ ಸಿಗದ ಕಾರಣ 'ಸಿ' ವರದಿಯನ್ನು ಸಲ್ಲಿರುತ್ತೇನೆ. ನಂತರ ನಿಪಿ-16 ಕ್ಕೆ ಪಿರ್ಯಾದುದಾರ ಉತ್ತರ ನೀಡಿರುತ್ತಾನೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ.ಗಳು, ಕಾರಟಗಿ.